**ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.**

**ಅಪರಾಧ ಪ್ರಕರಣ ಸಂಖ್ಯೆಃ 456/2023**

| | | |
|---|---|---|
| **ಸಾಕ್ಷಿಯ ಹೆಸರು** | ಅಭಿಲಾಷ್ | ಚಾಸಾ-1 |
| **ತಂದೆಯ ಹೆಸರು** | ಅಪ್ಪಣ್ಣ | |
| **ಉದ್ಯೋಗ** | ಬಟ್ಟೆ ಅಂಗಡಿಯಲ್ಲಿ ಕೆಲಸ | ಪ್ರಾಸಾ-1 |
| **ವಾಸ ಸ್ಥಳ** | ಕಾಕೋಡನಹಳ್ಳಿ | |
| **ದಿನಾಂಕಃ 04.06.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ

ಆರೋಪಿಯ ಪರಿಚಯ ನನಗೆ ಇಲ್ಲಾ. ಚಾಸಾ 2 ರವರ ಪರಿಚಯ ಇಲ್ಲಾ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲಾ. ದಿಃ 17.04.23 ರ ದೂರಿನಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು ಸಾಕ್ಷಿಯ ಸಹಿಯನ್ನು ನಿಪಿ1ಎ ಎಂದು ಗುರುತಿಸಲಾಯಿತು. ದಿಃ 18.04.23 ರ ಕೃತ್ಯ ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ2 ಎಂದು ಸಾಕ್ಷಿಯ ಸಹಿಯನ್ನು ನಿಪಿ2ಎ ಎಂದು ಗುರುತಿಸಲಾಯಿತು. ದಿಃ 18.04.23 ರಂದು ನನ್ನ ಸಮಕ್ಷಮ ಪೋ ಠಾಣೆಯಲ್ಲಿ ಅಮಾನತ್ತು ಪಡಿಸಿಕೊಂಡಂತಹ ವಾಹನವನ್ನು ಪೋಲೀಸರು ಬಿಡುಗಡೆಯ ದಾಖಲೆಯಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ3 ಎಂದು ಸಾಕ್ಷಿಯ ಸಹಿಯನ್ನು ನಿಪಿ3ಎ ಎಂದು ಗುರುತಿಸಲಾಯಿತು. ಈ ವಿಚಾರವಾಗಿ ನಾನು ಪೋಲೀಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ, ಪಾಟೀ ಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು)**

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ.

ದಿಃ 16.04.23 ರಂದು ರಾ. 9-30 ಕ್ಕೆ ಆರೋಪಿ ಅರಕಲಗೂಡು ಸೋಂಪುರ ಗ್ರಾಮದ ಸರ್ಕಲ್ ನಲ್ಲಿರುವ ಟಾರು ರಸ್ತೆಯಲ್ಲಿ ನನಗೆ ಯಾವುದೇ ಪರಿಚಯ ಇಲ್ಲದಿದ್ದರು ನನ್ನ ಮತ್ತು ಚಾಸಾ 2 ರವರ ಜೊತೆ ಜಗಳ ತೆಗೆದು ಮನೆಯಿಂದ ಕಬ್ಬಿಣದ ರಾಡನ್ನು ತಂದು ಚಾಸಾ 2 ರವರ ಎಡ ಭಾಗದ ತಲೆಗೆ ಹೊಡೆದು ರಕ್ತ ಗಾಯಪಡಿಸಿರುತ್ತಾರೆ ಮತ್ತುಸ್ಥಳದಲ್ಲಿ ಬಿದ್ದಿದ್ದ ದೊಡ್ಡ ಕಲ್ಲನ್ನು ಕೆಎ-13-ಡಿ-4587 ಅಶೋಕ ಲೈ ಲ್ಯಾಂಡ್ ಗೂಡ್ಸ ವಾಹನದ ಮುಂಭಾಗದ ಮತ್ತು ಚಾಲಕನು ಕೂರುವ 02 ಕಡೆಯ ಗಾಜುಗಳ ಮೇಲೆ ಎತ್ತಿ ಹಾಕಿ ಗಾಜುಗಳು ಒಡೆದು ನನಗೆ 11988/-

ರೂಗಳಷ್ಟು ನಷ್ಟ ಮಾಡಿದರು ಎಂದರೆ ಸರಿಯಲ್ಲ. ಈ ವಿಚಾರವನ್ನು ಆರೋಪಿಗೆ ಕೇದಾಗ ಆರೋಪಿ ನನಗೆ ಕೈಯಿಂದ ಮೈ ಕೈಗೆ ಗುದ್ದಿ ನೋವುಂಟು ಪಡಿಸಿರುತ್ತಾರೆ ಎಂದರೆ ಸರಿಯಲ್ಲ.

ದಿಃ 17.04.23 ರಂದು ಈ ವಿಚಾರವಾಗಿ ನಾನು ಪೋಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 18.04.23 ರಂದು ಸೋಂಪುರ ಗ್ರಾಮದ ಟಾರು ರಸ್ತೆಯಲ್ಲಿ ಬೆ. 9-30 ರಿಂದ 10-30 ರವರೆಗೆ ಮಾಡಿದ ಕೃತ್ಯ ಸ್ಥಳ ಮತ್ತು ಅಮಾನತ್ ಮಹಜರ್ ಕಾಲಕ್ಕೆ ನಾನು ಆ ಸ್ಥಳದಲ್ಲಿ ಇದ್ದು ಅದಕ್ಕೆ ಅಲ್ಲಿ ಸಹಿ ಮಾಡಿದ್ದು ನನಗೆ ಆ ದಾಖಲಾತಿ ಸಂಗತಿಗಳು ತಿಳಿದಿರುತ್ತದೆ ಎಂದರೆ ಸರಿಯಲ್ಲ. ಸದರಿ ಕಾಲಕ್ಕೆ ನನ್ನ ಸಮಕ್ಷಮ ಪೋಲೀಸರು ಒಂದು 03 ಅಡಿಯ ಕಬ್ಬಿಣದ ರಾಡು , ಒಂದು ದೊಡ್ಡ ಕಲ್ಲು ಮತ್ತು ಕೆಎ-13-ಡಿ-4587 ಅಶೋಕ ಲೈ ಲ್ಯಾಂಡ್ ಗೂಡ್ಸ ವಾಹನವನ್ನು ಅಮಾನತ್ತು ಪಡಿಸಿಕೊಂಡು ಮತ್ತು ಸದರಿ ಮಹಜರ್ ಗೆ ನನ್ನ ಜೊತೆ ಚಾಸಾ 5 ಹಾಗೂ 6 ರವರು ಸಹಿ ಹಾಕಿದ್ದರು ಎಂದರೆ ಸರಿಯಲ್ಲ.ದಿಃ 18.04.23 ರಂದು ಸಂಜೆ 5-45 ರಿಂದ 6-30 ರ ಸಮಯಕ್ಕೆ ಪೋಲೀಸರು ಪೋ ಠಾಣೆಯಲ್ಲಿ ನನ್ನ ಸಮಕ್ಷಮ ಕೆಎ-13-ಡಿ-4587 ಅಶೋಕ ಲೈ ಲ್ಯಾಂಡ್ ಗೂಡ್ಸ ವಾಹನವನ್ನು ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮತ್ತು ಸದರಿ ಮಹಜರ್ ಗೆ ನನ್ನ ಜೊತೆ ಚಾಸಾ 7 ಹಾಗೂ 8 ರವರು ಸಹಿ ಹಾಕಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಾನು ಪೋಲೀಸರಿಗೆ ದಿಃ 17.04.23 ರಂದು ಮರುಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು **ಶ್ರೀ. ಎನ್ ಕೆ .**ರವರಿಂದ. - ಇಲ್ಲಾ

**ಮರುವಿಚಾರಣೆ - ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಪ್ರ. ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು.**
**ಅರಕಲಗೂಡು**